# 51. ಕಂಟೋನ್ಮೆಂಟ್–ಶಿವಾಜಿನಗರ ಸುರಂಗ ಕಾರ್ಯಕ್ಕೆ ಮುಖ್ಯಮಂತ್ರಿ ಚಾಲನೆ

ಚೀನಾ ತಂತ್ರಜ್ಞರ ಅಲಭ್ಯತೆಯಿಂದ ಅತ್ಯಂತ ಸವಾಲಾಗಿದ್ದ ದೈತ್ಯ ಟನಲ್ ಬೋರಿಂಗ್ ಯಂತ್ರ (ಟಿಬಿಎಂ)ವನ್ನು ಪಳಗಿಸಿ ಕಾರ್ಯಾಚರಣೆಗೆ ಅಣಿಗೊಳಿಸುವಲ್ಲಿ 'ನಮ್ಮ ಮೆಟ್ರೋ' ಎಂಜಿನಿಯರ್‌ಗಳು ಯಶಸ್ವಿಯಾಗಿದ್ದಾರೆ.

ನಗರದ ಕಂಟೋನ್ಮೆಂಟ್–ಶಿವಾಜಿನಗರ ನಡುವೆ ಮೊದಲ ಟಿಬಿಎಂ 'ಊರ್ಜಾ' ಅನ್ನು ಸುರಂಗ ಕೊರೆಯುವ ಕಾರ್ಯಕ್ಕೆ ಕಂಟೋನ್ಮೆಂಟ್ ಬಳಿ ಅಣಿಗೊಳಿಸಲಾಗಿದೆ. ಇದಕ್ಕೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಚಾಲನೆ ನೀಡಿದರು.

ಎರಡನೇ ಹಂತದ ಸುರಂಗ ಕಾಮಗಾರಿಯನ್ನು ನಾಲ್ಕು ಪ್ಯಾಕೇಜ್‌ಗಳಾಗಿ ವಿಂಗಡಿಸಿದ್ದು, ಪ್ಯಾಕೇಜ್ 3ರಲ್ಲಿ (ಶಿವಾಜಿನಗರ–ಟ್ಯಾನರಿ ರಸ್ತೆ) ಈಗ ಕಾರ್ಯಾರಂಭವಾಗಿದೆ. ಉದ್ದೇಶಿತ ಯಂತ್ರವು ಮೊದಲು ಕಂಟೋನ್ಮೆಂಟ್– ಶಿವಾಜಿನಗರ ನಡುವಿನ 855 ಮೀಟರ್ ಉದ್ದದ ಸುರಂಗ ಕೊರೆಯಲಿದೆ. ಇದು ಮುಂದಿನ ಒಂಭತ್ತು ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ಒಟ್ಟಾರೆ ಶಿವಾಜಿನಗರ– ಕಂಟೋನ್ಮೆಂಟ್– ಟ್ಯಾನರಿ ರಸ್ತೆಯಲ್ಲಿರುವ ಶಾದಿಮಹಲ್‌ವರೆಗಿನ 2.88 ಕಿ.ಮೀ ಉದ್ದದ ಮಾರ್ಗವನ್ನು 20 ತಿಂಗಳಲ್ಲಿ ಪೂರ್ಣಗೊಳಿಸುವ ಗುರಿ ಬಿಎಂಆರ್‌ಸಿಎಲ್ ಮುಂದಿದೆ.

ಸಾಮಾನ್ಯವಾಗಿ ಯಾವುದೇ ದೇಶಗಳಲ್ಲಿ ಟಿಬಿಎಂ ಪೂರೈಕೆಯಾದರೂ ಆಯಾ ಕಂಪೆನಿಯ ತಜ್ಞರ ತಂಡ ಜೊತೆಗೆ ಹೋಗುತ್ತದೆ. 'ನಮ್ಮ ಮೆಟ್ರೋ. ಮೊದಲ ಹಂತದ ಸುರಂಗ ಕೊರೆಯುವಾಗಲೂ ಸುಮಾರು 70–80 ಜನ ವಿದೇಶದಿಂದ ಆಗಮಿಸಿದ್ದರು. ಯಾಕೆಂದರೆ, ಟಿಬಿಎಂಗಳ ಜೋಡಣೆ ಒಂದು 'ಪೋಸ್ಟ್ ಮಾರ್ಟಮ್' (ಮರಣೋತ್ತರ ಪರೀಕ್ಷೆ) ಇದ್ದಂತೆ. ಈ ದೈತ್ಯ ಯಂತ್ರದಲ್ಲಿ ಸಾವಿರಕ್ಕೂ ಅಧಿಕ ಕೇಬಲ್‌ಗಳು, ಬಿಡಿಭಾಗಗಳು ಬರುತ್ತವೆ. ಅವುಗಳ ಜೋಡಣೆಯಲ್ಲಿ ಒಂದೇ ವ್ಯತ್ಯಾಸವಾದರೂ ಯಂತ್ರ ಮುಂದೆ ಸಾಗದು. ಆದರೆ ಈ ಬಾರಿ ಕೋವಿಡ್ ಕಾರಣದಿಂದ ತಜ್ಞರ ತಂಡ ಇಲ್ಲಿಗೆ ಬರಲು ಸಾಧ್ಯವಾಗಲಿಲ್ಲ. ಯಂತ್ರದ ಜೋಡಣೆ ಕಾರ್ಯವನ್ನು ಸ್ವತಃ ಯೋಜನೆಯಲ್ಲಿನ ಹಿರಿಯ ಎಂಜಿನಿಯರ್‌ಗಳು ನಿರ್ವಹಿಸಿದರು. ಮೂವರು ಚೀನಾ ತಜ್ಞರು ಮಾತ್ರ ಇಲ್ಲಿ ಇದ್ದು ಸಹಕರಿಸಿದ್ದಾರೆ.

**ಯೋಜನಾ ವೆಚ್ಚ ರೂ.30,695 ಕೋಟಿ:** ಟಿಬಿಎಂಗೆ ಚಾಲನೆ ನೀಡಿ ಮಾತನಾಡಿದ ಮುಖ್ಯಮಂತ್ರಿಯವರು ನಗರದ ಸಂಚಾರದಟ್ಟಣೆ ತಗ್ಗಿಸುವಲ್ಲಿ 'ನಮ್ಮ ಮೆಟ್ರೋ' ಪ್ರಮುಖ ಪಾತ್ರ ವಹಿಸುತ್ತಿದೆ. ಯೋಜನೆಯ ಎರಡನೇ ಹಂತವು ಒಟ್ಟಾರೆ 72 ಕಿ.ಮೀ ವ್ಯಾಪ್ತಿಯಲ್ಲಿ ವಿಸ್ತರಣೆಯಾಗಲಿದ್ದು, ಸುಮಾರು 30,695 ಕೋಟಿ ವೆಚ್ಚದಲ್ಲಿ ಇದು ನಿರ್ಮಾಣಗೊಳ್ಳಲಿದೆ. ಇದರ ಜೊತೆಗೆ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಇದು ಸಂಪರ್ಕ ಕಲ್ಪಿಸಲಿದೆ ಎಂದು ಮಾಹಿತಿ ನೀಡಿದರು.

ಸಚಿವರಾದ ಡಾ:ಅಶ್ವತ್ಥನಾರಾಯಣ, ಆರ್.ಅಶೋಕ್, ಭೈರತಿ ಬಸವರಾಜು, ಶಾಸಕ ಅಖಂಡ ಶ್ರೀನಿವಾಸಮೂರ್ತಿ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಜಯ್ ಸೇಠ್ ಇತರರಿದ್ದರು.

**ಪ್ಯಾಕೇಜ್–3ಮಾರ್ಗದ ವಿವರ**

| | | |
|---|---|---|
| 855 ಮೀ.<br>ಶಿವಾಜಿನಗರ–ಕಂಟೋನ್ಮೆಂಟ್ ನಿಲ್ದಾಣ | 896 ಮೀ.<br>ಕಂಟೋನ್ಮೆಂಟ್ ನಿಲ್ದಾಣ–ಪಾಟರಿ ಟೌನ್ | 682 ಮೀ.<br>ಪಾಟರಿ ಟೌನ್ ನಿಲ್ದಾಣ–ಶಾದಿಮಹಲ್ |

855 ಮೀ. ಉದ್ದದ ಸುರಂಗ ಮಾರ್ಗದಲ್ಲಿ ಬಿಎಂಆರ್‌ಸಿಎಲ್ ನಡೆಸಿದ ಅಧ್ಯಯನದ ಪ್ರಕಾರ 250 ಮೀ. ಉದ್ದ ಗಟ್ಟಿಕಲ್ಲು, 350 ಮೀ.ಕಲ್ಲು–ಮಣ್ಣು ಮಿಶ್ರ ಹಾಗೂ 255 ಮೀ. ಮಣ್ಣಿನಿಂದ ಕೂಡಿದೆ. ಶೀಘ್ರ ಮತ್ತೊಂದು ಯಂತ್ರ 'ವಿಂಧ್ಯಾ' ಕೂಡ ಇದೇ ಮಾರ್ಗದಲ್ಲಿ ಸುರಂಗ ಕೊರೆಯುವ ಕಾರ್ಯ ಆರಂಭಿಸಲಿದೆ ಎಂದು ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

**5200 ಕಾರ್ಮಿಕರು ವಾಪಸ್ಸು:**–ಎರಡನೇ ಹಂತದ ಮೆಟ್ರೋ ಯೋಜನೆಗೆ 9300 ಕಾರ್ಮಿಕರನ್ನು ನಿಯೋಜಿಸಲಾಗಿತ್ತು. ಆದರೆ, ಕೊರೋನಾ ಹಾವಳಿಯಿಂದ ಸುಮಾರು 5,200 ಕಾರ್ಮಿಕರು ವಾಪಸ್ಸು ತಮ್ಮ

ಊರುಗಳಿಗೆ ತೆರಳಿದ್ದಾರೆ ಎಂದು ನಿಗಮ ತಿಳಿಸಿದೆ. ಈ ಕೊರತೆ ನೀಗಿಸಲು ಗುತ್ತಿಗೆದಾರರು ಕರ್ನಾಟಕದ ವಿವಿಧ ಜಿಲ್ಲೆಗಳು ಹಾಗೂ ಇತರೆ ರಾಜ್ಯಗಳಿಂದ ಹೊಸದಾಗಿ ಕಾರ್ಮಿಕರನ್ನು ಕರೆತರುತ್ತಿದ್ದು, ಈವರೆಗೆ 2,400 ಕಾರ್ಮಿಕರನ್ನು ಶಿಬಿರಕ್ಕೆ ಸೇರ್ಪಡೆಗೊಳಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

**ಮುಂದೆ ಮೆಟ್ರೋ ಸೇವೆ ಆರಂಭ:**–ಮುಂದಿನ ಹಂತದಲ್ಲಿ 'ನಮ್ಮ ಮೆಟ್ರೋ' ಇರುವ ನಿರ್ಬಂಧ ಕೂಡ ತೆರವಾಗಲಿದೆ ಎಂದು ಉಪ ಮುಖ್ಯಮಂತ್ರಿ ಡಾ:ಅಶ್ವತ್ಥ ನಾರಾಯಣ ತಿಳಿಸಿದರು. ಮೆಟ್ರೋ ಸುರಂಗ ನಿರ್ಮಾಣ ಚಾಲನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಸುದ್ದಿಗಾರರ ಜೊತೆ ಮಾತನಾಡಿ, ಹಂತ–ಹಂತವಾಗಿ ಎಲ್ಲವೂ ಅನ್‌ಲಾಕ್ ಆಗುತ್ತಿದೆ. ಮೆಟ್ರೋ ಕೂಡ ಇದಕ್ಕೆ ಹೊರತಾಗಿರುವುದಿಲ್ಲ. ವಾಣಿಜ್ಯ ಸೇವೆ ಪುನಾರಂಭಕ್ಕೆ ಸಂಬಂಧಿಸಿದಂತೆ ಪರಿಸ್ಥಿತಿ ನೋಡಿಕೊಂಡು ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಆಧಾರ:ಉದಯವಾಣಿ, ದಿನಾಂಕ:31.07.2020